Regd No B G 155 10-2-1970

SATYAVADI Daily, MYSORE 4 ★ 53 rd Year of Publication

Golden Jubilee Celebrated Paper

ಸತ್ಯವಾದಿ

ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಪ್ರಕಟಿಸಿದ ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಸಂಸ್ಕೃತವು ರಾಷ್ಟ್ರಭಾಷೆಯಾಗಲೆಂದು ಕೇಳಿಕೆ

ಅಪಾರ ಚಿನ್ನ ವಶ

ಮಧುರೈ— ರೂ 10 ಲಕ್ಷದ 5000 ತೊಲಾ ಚಿನ್ನವನ್ನು ಇಲ್ಲಿಗೆ 65 ಮೈಲಿ ದೂರದ ತೆನ್ಕಾಶಿಯಲ್ಲಿ ಕೇಂದ್ರ ಎಕ್ಸೈಜಿನವರು ವಶಪಡಿಸಿಕೊಂಡರು.

★

ಪಶ್ಚಿಮ ಬಂಗಾಳಾ ಸರಕಾರದ ಗಮನಕ್ಕೆ

ನವದೆಹಲಿ— ಕಲ್ಕತ್ತಾದಲ್ಲಿ ರಾಜಕಾರಣಿಗಳ ತಂಡವು ಅಲ್ಲಿ ಹೆಚ್ಚುತ್ತಿರುವ ಅಸುರಕ್ಷತೆ ಬಗ್ಗೆ ಕಳವಳಗೊಂಡಿರುವ ವಿಷಯದಲ್ಲಿ ಕೇಂದ್ರ ಸರಕಾರವು ಪಶ್ಚಿಮ ಬಂಗಾಳಾ ಸರಕಾರದ ಗಮನ ಸೆಳೆದಿದೆ.

○

ವಿರೋಧ ಗುಂಪು

ಹೈದರಾಬಾದು— ಆಂಧ್ರ ಪ್ರದೇಶದ ಶಾಸನಸಭೆಯಲ್ಲಿ ತೆಲಂಗಾಣಾ 31 ಮುಂದಿಯ ಗುಂಪಿಗೆ ವಿರೋಧ ಗುಂಪೆಂದು ಮನ್ನಣೆ ಕೊಡಲಾಗಿದೆ.

○

5 ನೇ ಉಕ್ಕಿನ ಯಂತ್ರಾಗಾರ

ಬೆಂಗಳೂರು— 5 ನೇ ಉಕ್ಕು ಯಂತ್ರಾಗಾರ ಸ್ಥಾಪನೆಗೆ 3 ಸ್ಥಳಗಳಲ್ಲಿ ಹೊಸ ಪೇಟೆಯನ್ನೂ ಆರಿಸಲಾಗಿರುವುದಾಗಿ ಗೊತ್ತಾಗಿದೆ.

●

ದಿವ್ಯವಾಣಿ

ಒಂದು ಪೌಂಡು ಬೋಧನೆ ಮಾಡುವುದಕ್ಕಿಂತ ಒಂದು ಔನ್ಸು ಮಾಡಿ ತೋರಿಸುವುದು ಹೆಚ್ಚು ಬೆಲೆ ಬಾಳುವುದು.

— ಹೆಲ್ಲುರ್ಬ್ ಹುಬಾರ್ಡ್

ಬ್ಯಾಂಕು ರಾಷ್ಟ್ರೀಕರಣ

ನವದೆಹಲಿ— ಬ್ಯಾಂಕು ರಾಷ್ಟ್ರೀಕರಣ ಸುಗ್ರೀವಾಜ್ಞೆ ಮತ್ತು ಶಾಸನವನ್ನು ಸುಪ್ರೀಂ ಕೋರ್ಟು ತಿರಸ್ಕರಿಸಿದೆ.

●

ರೈಲ್ವೆ ಬಜೆಟ್

ನವದೆಹಲಿ— ರೈಲ್ವೇ ಬಜೆಟ್ಟಿನಲ್ಲಿ ಆದಾಯ ಸ್ವಲ್ಪ ಕಡಮೆಯಾಗುವ ನಿರೀಕ್ಷೆ ಇದ್ದು ಸಾಮಾನು ಸಾಗಾಣಿಕೆ ದರ ಹೆಚ್ಚುವ ಸಂಭವವಿದೆಯೆನ್ನಲಾಗಿದೆ.

★

ಸಂಸ್ಕೃತದ ಮಹಿಮೆ

ಹಿಂದೆ ಭಾರತದ ವೈಸರಾಯಾಗಿದ್ದ ವಾರ್ರ್ ಹೇಸ್ಟಿಂಗ್ಸ್ ಸಂಸ್ಕೃತ ವಿದ್ಯೆಯ ಪ್ರೋತ್ಸಾಹಕರಾಗಿದ್ದರೆಂದೂ, ಭಾರತವನ್ನು ಶತಮಾನಗಳ ಕಾಲ ಕಾಪಾಡಲಾಗಿರುವ ಪಾರಮಾರ್ಥಿಕ ಮತ್ತು ಸಾಂಸ್ಕೃತಿಕ ವಿಚಾರಗಳಿಗೆ ಸಂಸ್ಕೃತ ಕಾರಣವೆಂದೂ ಲಾರ್ಡ್ ಕರ್ಜನ್ನರು ಅಭಿಪ್ರಾಯ ಪಟ್ಟಿರುವರು.

○

ನೀರಿನ ವ್ಯಾಜ್ಯ

ನವದೆಹಲಿ - ಕಾವೇರಿ ನೀರಿನ ವ್ಯಾಜ್ಯದ ಬಗ್ಗೆ ನೀರಾವರಿ ಮತ್ತು ವಿದ್ಯುಚ್ಛಕ್ತಿ ಸಚಿವ ಡಾ || ಕೆ ಎಲ್ ರಾವ್‌ರವರ ಅಧ್ಯಕ್ಷತೆಯಲ್ಲಿ ಕೇರಳ, ತಮಿಳುನಾಡು ಮತ್ತು ಪ್ರತಿನಿಧಿಗಳು ಸಮ್ಮಿಳಿತರಾಗಿ ಚರ್ಚೆ ನಡೆಸಿದರು — ಈ ಚರ್ಚೆ, ಆಧಾರದ ಮೇಲೆ ಸೂಚನೆ ತಯಾರಿಸಿ ರಾಜ್ಯಗಳಿಗೆ ಕಳಿಸಬೇಕೆಂದು ಒಪ್ಪಿತನಾಯಿತು.

★

ಭೂ ಸೇನೆ ಕಾರ್ಯ ನಡೆಸೀತು

ಬೆಂಗಳೂರು— ಭೂ ಸಮಸ್ಯೆಯನ್ನು ನ್ಯಾಯವಾಗಿ, ಸರಿಯಾಗಿ ಪರಿಹರಿಸದಿದ್ದರೆ, ಭೂ ಮಾಲೀಕರ " ಭೂಸೇನೆ " ಯು ನ್ಯಾಯ ದೊರೆಯಲು ಕಾರ್ಯ ಕೈಗೊಳ್ಳಬೇಕಾದೀತೆಂದು ಭೂಸೇನಾ ಸ್ಥಾಪಕ, ಶಾಸನ ಸಭಾ ಸದಸ್ಯ ಶ್ರೀ ಧರ್ತಕುಮಾರ್ ಕಟ್ಟೀಮಾರ್ ಪತ್ರಿಕೆಯವರಿಗೆ ತಿಳಿಸಿದರು — ಭೂಮಾಲೀಕರಿಗೆ ಉತ್ಕಟ ಸ್ಥಿತಿ ಉಂಟಾಗಿದೆ ಎಂದಿರುವರು.

★

ಭಾರತ ಭಾಗವಹಿಸುವುದು

ನವದೆಹಲಿ— ಪೋಲೆಂಡಿನ ಪೊಜ್ನಾ ಎಂಬಲ್ಲಿ ನಡೆಯಲಿರುವ ಅಂತರ್ರಾಷ್ಟ್ರೀಯ ಮೇಳದಲ್ಲಿ ಭಾಗವಹಿಸಲು ಭಾರತ ನಿರ್ಧರಿಸಿದೆ ; ಜೂನ್ 14 ರಿಂದ 20 ರವರೆಗೆ ನಡೆಯುವುದು

○

ಆನೆಗಳ ಹೊಡೆದಾಟ

ಕೊಯಮುತ್ತೂರು— ಆನಾಮಲೈನಲ್ಲಿನ ಟಾಪ್‌ಸ್ಲಿಪ್ ಭಾಗದಲ್ಲಿ ಈಚೆಗೆ ಆದ ಆನೆಗಳ ಹೊಡೆದಾಟದಲ್ಲಿ 3 ಸಲಗಗಳು ಸತ್ತವು.

★

ಸಾಮಾಜಿಕ ಕ್ರಾಂತಿ

ಕೋಟಾ— ರಾಷ್ಟ್ರವು ಪೂರ್ಣವಾಗಿ ದೇಶ ನಿರ್ಮಾಣ ಕಾರ್ಯದಲ್ಲಿ ಮಗ್ನವಾಗಬೇಕಾಗಿರುವುದರಿಂದ, ಕೈಗಾರಿಕಾ ಕ್ರಾಂತಿಗೆ ಮುಂಚೆ ಸಾಮಾಜಿಕ ಕ್ರಾಂತಿ ಅವಶ್ಯಕವೆಂದು ಪ್ರಧಾನಿ ಇಂದಿರಾ ಹೇಳಿದರು

★

ಸಂಸ್ಕೃತ

ಅಲಹಾಬಾದು — ಸಂಸ್ಕೃತವನ್ನು ರಾಷ್ಟ್ರಭಾಷೆಯನ್ನಾಗಿ ಮಾಡಬೇಕೆಂದೂ, ಅದಕ್ಕಾಗಿ ರಾಜ್ಯಾಂಗವನ್ನು ಸೂಕ್ತವಾಗಿ ತಿದ್ದುಪಡಿ ಮಾಡಬೇಕೆಂದೂ ವಿಶ್ವ ಸಂಸ್ಕೃತ ಸಮ್ಮೇಳನದಲ್ಲಿ ಕೇಳಿಕೆ ಹಾಕಲಾಗಿದೆ

○

ಪ್ಲಾಸ್ಟಿಕ್ ಹಡಗು

ನವದೆಹಲಿ— ಜರ್ಮನಿಯ ಬ್ರವರ್ ಹೇವನ್ನಿನಲ್ಲಿ ವಿಶ್ವದ ಪ್ರಪ್ರಥಮ ಪ್ಲಾಸ್ಟಿಕ್ ಹಡಗು ಕಟ್ಟಲಾಗುತ್ತಿದೆ.

○

ಪ್ರಸಾದದಲ್ಲಿ ಖೋತಾ

ತಿರುಪತಿ— ಕಲ್ಯಾಣೋತ್ಸವಕ್ಕೆ ಪಾವತಿ ಮಾಡುವ ಭಕ್ತರಿಗೆ. ಪದಾರ್ಥಗಳ ಬೆಲೆ ಹೆಚ್ಚಾಗಿರುವುದರಿಂದ, ಅವರಿಗೆ ಕೊಡುವ ಪ್ರಸಾದದಲ್ಲಿ ಖೋತಾಮಾಡಲಾಗುವುದೆಂದು ಪ್ರಕಟವಾಗಿದೆ.

○

ರಾಜರ ನಿರ್ಧಾರ

ಬೊಂಬಾಯಿ— ತಮಗೆ ಒದಗಿರುವ ಬಿಕ್ಕಟ್ಟಿದ ಪರಿಸ್ಥಿತಿಯಲ್ಲಿ ಅವಶ್ಯಕಬಿದ್ದರೆ ಸುಪ್ರೀಂ ಕೋರ್ಟಿಗೆ, ಹೇಗ್‌ನ ವಿಶ್ವ ಕೋರ್ಟಿಗೆ ಹೋಗುವ ಪ್ರಶ್ನೆಯನ್ನೂ ಪರ್ಯಾಲೋಚಿಸಲಿರುವರು.

★

ಜನಸಂಘದ ನಿರ್ಧಾರ

ಶಿವಮೊಗ್ಗ— ವೀರೇಂದ್ರ ಪಾಟೀಲರವರ ಮಂತ್ರಿಮಂಡಲವನ್ನು ಉರುಳಿಸಲು ಜನಸಂಘ ಸೇರುವುದಿಲ್ಲವೆಂದು ಉದರ ಲ್ಲಧ್ಯಕ್ಷರು ಪತ್ರಿಕೆಯವರಿಗೆ ತಿಳಿಸಿದರು.

"Bank Road Bahusar – A Fair Price Shop in Actual Practice"

ಅಮೇರಿಕಾ ರಾಜಧಾನಿಯಲ್ಲಿ ತಕ್ಸೀರು ಹೆಚ್ಚಿದೆ

ಖೂನಿ, ಅಕ್ರಮ ಸುಭೋಗ, ಕಳ್ಳತನಗಳು 1963 ರಲ್ಲಿ ಅಮೇರಿಕಾ ರಾಜಧಾನಿಯಲ್ಲಿ ಶಿಖರಕ್ಕೇರಿತು.

1958 ರಿಂದ ವಾಷಿಂಗ್ಟನ್ನಿನಲ್ಲಿ ಒಟ್ಟು ತಕ್ಸೀರುಗಳು ಶೇಕಡಾ 600 ಹೆಚ್ಚಿದೆ ಎಂದು ಪೋಲೀಸು ಮುಖ್ಯಾಧಿಕಾರಿಯರ ಹೇಳಿಕೆ.

§ ಇದು ಅಮೇರಿಕಾ ! ಸುಭಿಕ್ಷೆ ಮತ್ತು ಸಮ್ಮಾನದ ಸ್ವರ್ಗದಂಥ ಆಶ್ರಯ ಭೂಮಿ ; ಆದ್ದರಿಂದ ನಿಸ್ಸೀಮ ಅಪರಾಧಿಗಳ ಅತ್ಯಂತ ಸುಖದಾಯಕ ಬೇಟೆಭೂಮಿ.

●✱●

ಟ್ರಾಕ್ಟರುಗಳಿಗೆ ಒಪ್ಪಂದ

ಸುಮಾರು ಎರಡು ಕೋಟಿ ರೂ. ಬೆಲೆಬಾಳುವ 1500 ಟ್ರಾಕ್ಟರುಗಳನ್ನು ಸೋವಿಯತ್ ರಷ್ಯಾದಿಂದ ಆಮದುಮಾಡಿಕೊಳ್ಳುವುದಕ್ಕಾಗಿ ಇದೇ ದಿನಾಂಕ 7 ರಂದು ನವದೆಹಲಿಯಲ್ಲಿ ಭಾರತದ ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ ಹಾಗೂ ಸೋವಿಯತ್ ರಷ್ಯಾದ ವಿ ಒ ಟ್ರಾಕ್ಟೊರೋ ಎಕ್ಸ್‌ಪೋರ್ಟು ಸಂಸ್ಥೆಗಳ ನಡುವೆ ಒಪ್ಪಂದವೊಂದು ಏರ್ಪಟ್ಟಿತು.

ಗಾಂಧೀಜೀ ಅಮೃತವಾಣಿ

ತನ್ನ ಸದ್ವಿವೇಕ ಬುದ್ಧಿಗೆ ವಿರೋಧಿಯಾಗಿ ವರ್ತಿಸುವ ನಾಯಕ ನಿರುಪಯೋಗಿ ; ಎಲ್ಲಾ ಬಗೆಯ ಅಭಿಪ್ರಾಯಗಳ ಜನರ ನಡುವ ಇರುವ ಅವನ ಸ್ಥಿತಿ ಚುಕ್ಕಾಣಿಯಿಲ್ಲದ ನೌಕೆಯಂತೆ : ಅಂತರಾತ್ಮನ ವಾಣಿಯೇ ಅವನ ಮಾರ್ಗದರ್ಶನ ಮಾಡಬಲ್ಲದು.

Help The Gorakshana



Protect the Cow

ಗೋರಕ್ಷಣೆ ಮತ್ತು ಪಾಣಿಪಶು ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ನೀಡಿ

ಅಖಿಲ ಭಾರತದಲ್ಲಿ ಕೂಡಲೇ
ಗೋವಧೆ ನಿಷೇಧವಾಗಲಿ

Quality Printing — Neat Binding

Lakshminarasimha Press

Sivarampet, Mysore

ಪುರಭವಾಂಡ್ ಅಮೋಘ 6 ನೇ ವಾರ
ಶಿನ ಅಮೋಘ ಪ್ರಾರಂಭ

.... ನೂಕುನುಗ್ಗಲಲ್ಲಿ ಜನ ಬಂದು ನೋಡುತ್ತಿರುವರು ....

ಓರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

ಗೆಜ್ಜೆ ಪೂಜೆ
ಜ

ನಟವರ್ಗ– ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಸಂಹರಿಬಾಯಿ

[ದಿನ 3 ಪ್ರದರ್ಶನಗಳು]

ಆಪೆರಾ— 6-2-70 ರಿಂದ

.... ಅತ್ಯಮೋಘ ಹಿಂದಿ ಚಿತ್ರ ....

ಪ್ಯಾರ್ ಹಿ ಪ್ಯಾರ್
ಶೆ ೨

ಪಾತ್ರ – ವೈಜಯಂತಿ ಮಾಲ ಧರ್ಮೇಂದ್ರ

ದಿನ 3 ಆಟಗಳು

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ

ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಗೋರಕ್ಷಣೆಕ್ಕೆ ಚಂದಾ ಮತ್ತು ಡೊನೇರ್ಷ ಪಾವತಿಮಾಡುವ ಅಡ್ರೆಸ್

1. ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ
ಹೊಂಗನೂರು, ಚಾಮರಾಜನಗರ ತಾಲ್ಲೂಕ
2. ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಟ್ರಾಲಜರ್, 180 ನ್ಯೂ ಬ್ಲಾಕ್,
ವಿದ್ಯಾರಣ್ಯಪುರಂ, ಮೈಸೂರು.
3. ಡಾ || ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್,
ಪ್ರಾಣಿಡಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು
ಗೋರಕ್ಷಣ ಆಫೀಸ್, ಸತ್ಯವಾದಿಪ್ರೆಸ್ ಚಾಮರಾಜಪುರಂ, ಮೈಸೂರು 4

SHAKTI
SUDHA

A Superb Tonic

Edited Printed & Published by Dharmaprachara Nirata
M. S Krishna Rao (Proprietor) at the Satyavadi Press
Chamarajapuram, Mysore 4